# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 603 (622)
ಸದಸ್ಯರ ಹೆಸರು : ಶ್ರೀ ಆರ್ ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 25.07.2019
ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಮೈಸೂರು ಕಾಗದ ಕಾರ್ಖಾನೆಯನ್ನು ಮತ್ತೆ ಪ್ರಾರಂಭಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೇ ಅಥವಾ ಈ ಕಾರ್ಖಾನೆಯನ್ನು ಪ್ರಾರಂಭ ಮಾಡದಿದ್ದಲ್ಲಿ ಖಾಸಗಿಯವರಿಗೆ ಗುತ್ತಿಗೆ ನೀಡುವ ಬಗ್ಗೆ ಅಥವಾ ಮಾರಾಟ ಮಾಡುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ: | ಮೈಸೂರು ಕಾಗದ ಕಾರ್ಖಾನೆಯನ್ನು ಮತ್ತೆ ಪ್ರಾರಂಭಿಸುವ ಯೋಚನೆ ಸರ್ಕಾರಕ್ಕೆ ಇರುವುದಿಲ್ಲ. ಕಾರ್ಖಾನೆಯ ಕಾರ್ಯಚಟುವಟಿಕೆಗಳನ್ನು ಖಾಸಗಿಯವರಿಗೆ ಗುತ್ತಿಗೆ ನೀಡಲು ಸಚಿವ ಸಂಪುಟದ ನಿರ್ಣಯದನ್ವಯ ತೀರ್ಮಾನಿಸಲಾಗಿದೆ. |
| ಆ) | ಈ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಎಷ್ಟು ನೌಕರರು ವಿಆರ್‌ಎಸ್ ಪಡೆದಿದ್ದಾರೆ: ವಿಆರ್ ಎಸ್ ಪಡೆಯದೆ ಇರುವ ನೌಕರರ ಸಂಖ್ಯೆ ಎಷ್ಟು; ಇವರುಗಳನ್ನು ಬೇರೆ ಇಲಾಖೆಗೆ ನಿಯೋಜನೆ ಮಾಡುವ ಉದ್ದೇಶವಿದೆಯೇ: | ಸರ್ಕಾರವು ಎಲ್ಲಾ ಖಾಯಂ ಉದ್ಯೋಗಿಗಳಿಗೆ ಸ್ವಯಂ ನಿವೃತ್ತಿ ಯೋಜನೆ ಹಾಗೂ ಎಲ್ಲಾ ಗುತ್ತಿಗೆ ಆಧಾರದ ಕಾರ್ಮಿಕರಿಗೆ ಸ್ವಯಂ ಪ್ರತ್ಯೇಕೀಕರಣ ಯೋಜನೆಯನ್ನು ಜಾರಿಗೊಳಿಸಲಾಗಿದೆ. (see table below) |
| ಇ) | ಉದ್ದೇಶವಿದ್ದಲ್ಲಿ, ಸದರಿ ಕಾರ್ಮಿಕರನ್ನು ಯಾವ ಕಾಲಮಿತಿಯೊಳಗೆ ನಿಯೋಜನೆ ಮೇಲೆ ಕಳುಹಿಸಲಾಗುವುದು: ಈ ನಿಯೋಜನೆಯಿಂದ ತಾಂತ್ರಿಕವಾಗಿ ತೊಂದರೆಗಳೇನಾದರೂ ಉದ್ಭವಿಸುತ್ತದೆಯೇ? (ಸಂಪೂರ್ಣ ವರದಿ ನೀಡುವುದು) | |

| ಕ್ರಸ | ವಿವರ | ಸಂಖ್ಯೆ |
|---|---|---|
| 1 | ವಿ.ಆರ್.ಎಸ್. ಪಡೆದಿರುವ ನೌಕರರ ಸಂಖ್ಯೆ | 773 |
| 2 | ವಿ.ಎಸ್.ಎಸ್ ಪಡೆದಿರುವ ನೌಕರರ ಸಂಖ್ಯೆ | 1028 |
| 3 | ವಿ.ಆರ್.ಎಸ್ ಪಡೆಯದೇ ಇರುವ ನೌಕರರ ಸಂಖ್ಯೆ | 220 |

ಇದರಲ್ಲಿ 117/ಉದ್ಯೋಗಿಗಳು/ಅಧಿಕಾರಿಗಳು ಸರ್ಕಾರದ ವಿವಿಧ ನಿಗಮ/ಮಂಡಳಿಗಳಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಕಾರ್ಮಿಕ ಇಲಾಖೆ, ಇವರ ಆದೇಶ ಸಂಖ್ಯೆ: ಕಾಇ 226 ಐ.ಡಿ.ಜಿ 2019 ದಿನಾಂಕ: 28.06.2019ರಲ್ಲಿ 442 ಕೈಗಾರಿಕಾ ವಿವಾದ ಕಾಯ್ದೆ ಕಂ 25 (ಓ) (2) ರಡಿ ಕಾರ್ಖಾನೆಯನ್ನು ಮುಚ್ಚಲು ಅನುಮತಿ ನೀಡಿರುವುದರಿಂದ ಉದ್ಯೋಗಿಗಳಿಗೆ ನಿಯಮಾನುಸಾರ ಮುಚ್ಚುವ ಪರಿಹಾರ (Closure Compensation) ನೀಡಿ ಇವರ ಸೇವೆಯನ್ನು ಮುಕ್ತಾಯ-ಗೊಳಸಬೇಕಾಗಿರುತ್ತದೆ. ಈ ಮಧ್ಯ ಮೇಲ್ಕಂಡ ಆದೇಶವನ್ನು ಪ್ರಶ್ನಿಸಿ ಕಾರ್ಖಾನೆಯ ಉದ್ಯೋಗಿಗಳ ಸಂಘವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ 30139/2019ರಲ್ಲಿ ದಾಖಲಿಸಿದ್ದು ವಿಚಾರಣೆಯು ಮುಂದುವರೆದಿದೆ. ದಿನಾಂಕ: 20.08.2019 ರಂದು ಮಾನ್ಯ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯ ಸಂದರ್ಭದಲ್ಲಿ ವಿ.ಆರ್.ಎಸ್ ಪಡೆಯದಿರುವ ಉದ್ಯೋಗಿಗಳನ್ನು ನಿಯೋಜನೆ ಮೇಲೆ ಕಳುಹಿಸಲು ವ್ಯವಸ್ಥೆ ಮಾಡುವಂತೆ ಪ್ರತಿವಾದಿಗಳಾದ ಕಾರ್ಮಿಕ ಇಲಾಖೆಗೆ ನೀಡಿರುವ ನಿರ್ದೇಶನದ ಹಿನ್ನೆಲೆಯಲ್ಲಿ ಎಂ.ಪಿ.ಎಂ ಸಂಸ್ಥೆಯಿಂದ ಉದ್ಯೋಗಿಗಳನ್ನು ನಿಯೋಜನೆ ಮೇಲೆ ಪಡೆಯುವಂತೆ ಎಲ್ಲಾ ನಿಗಮ/ಮಂಡಳಿಗಳಿಗೆ ದಿ: 20.09.2019ರಂದು ಪತ್ರ ಹೊರಡಿಸಲಾಗಿದೆ.

ಸಿಐ 26 ಸಿಪಿಎಂ 2019 (ಇ)

(ಜಗದೀಶ ಶೆಟ್ಟರ),
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು.